**ಹೆಂಡತಿ:** ಡಾಕ್ಟರ್ ನಂಗೆ ಫುಲ್ ರೆಸ್ಟ್ ತಗೊಳಕ್ಕೆ ಊಟಿಗೋ ಕೊಡೈಕೆನಾಲ್‌ಗೋ ಹೋಗೋಕೆ ಹೇಳಿದ್ದಾರೆ. ನಾವು ಅಲ್ಲಿಗೆ ಹೋಗೋಣ್ವೇನ್ರೀ?
**ಗಂಡ:** ಹೋಗೋಣ, ಆದ್ರೆ ಬೇರೆ ಡಾಕ್ಟರ್ ಹತ್ರ...

ಇಬ್ಬರು ಹುಚ್ಚರು ಟೆರೇಸ್ ಮೇಲೆ ಮಲಗಿದ್ದರು. ಮಳೆ ಬರಲಾರಂಭಿಸಿತು. ಆಗ,
**ಮೊದಲ ಹುಚ್ಚ:** ನಡಿ ಕೆಳಗೆ ಹೋಗಿ ಮಲಗೋಣ, ಆಕಾಶ ತೂತಾಗಿದೆ. (ಅಷ್ಟರಲ್ಲಿ ಆಕಾಶ ಮಿಂಚತೊಡಗಿತು)
**ಎರಡನೇ ಹುಚ್ಚ:** ಇಲ್ಲೇ ಮಲಗೋ ವೆಲ್ಡಿಂಗ್ ಮಾಡೋರು ಬಂದ್ರು!

**ಹುಡುಗಿ:** ಮೋಡಗಳು ಗುಡುಗಿ ಸದ್ದಾದರೆ ನಿನ್ನ ನೆನಪಾಗುತ್ತದೆ, ತಂಪಾದ ಮಳೆ ಗಾಳಿ ಬೀಸಿದರೆ ನಿನ್ನ ನೆನಪಾಗುತ್ತದೆ. ಮಳೆ ಹನಿಗಳು ಉದುರಲು ಆರಂಭಿಸಿದರೆ ನನಗೆ ನಿನ್ನ ನೆನಪಾಗುತ್ತದೆ...
**ಹುಡುಗ:** ಸರಿ ಸರಿ ನನಗೆ ಗೊತ್ತಾಯ್ತು ನಿನ್ನ ಛತ್ರಿ ನಮ್ಮನೇಲೇ ಇದೆ. ನಾಳೆ ತಂದುಕೊಡ್ತೀನಿ.







**ಡಾಕ್ಟರ್:** ನಿಮ್ಮ ದೇಹದಲ್ಲಿ 265 ಮೂಳೆಗಳಿವೆ.
**ಗಂಡ:** ಮೆಲ್ಲಗೆ ಹೇಳಿ ಡಾಕ್ಟರೇ, ಹಿಂದೆ ನನ್ನ ನಾಯಿ ಕೂತಿದೆ.

**ಗಂಡ:** ನಮ್ಮ 45 ವರ್ಷದ ದಾಂಪತ್ಯದಲ್ಲಿ ಇವತ್ತು ಕಾಫಿ ಬಹಳ ಚೆನ್ನಾಗಿ ಮಾಡಿದ್ದೀಯ ಡಿಯರ್!
**ಹೆಂಡತಿ:** ಅಯ್ಯೋ ನನ್ನ ಮರೆವೇ ನನ್ನ ಕಾಫಿ ಗ್ಲಾಸ್ ನಿಮಗೆ ಕೊಟ್ಟ ಹಾಗಿದೆ.

**ಹೆಂಡತಿ:** ಎಣ್ಣೆ ಹಾಕಿಕೊಂಡು ಸ್ನಾನ ಮಾಡುವಿರಂತೆ ಎದ್ದೇಳ್ರಿ.
**ಗಂಡ:** ಇಷ್ಟು ಬೇಗ ಬಾರ್ ಓಪನ್ ಆಗಿರಲ್ಲ ಕಣೇ!

ಡಾಕ್ಟರ್ ಒಬ್ಬ ಮಹಿಳೆಯ ಬಾಯಲ್ಲಿ ಥರ್ಮಾಮೀಟರ್ ಇಟ್ಟು 'ಸ್ವಲ್ಪ ಹೊತ್ತು ಬಾಯಿ ಮುಚ್ಚಿ' ಅಂತ ಹೇಳಿದರು. ಹೆಂಡತಿ ಇಷ್ಟೊಂದು ಸೈಲೆಂಟ್ ಆಗಿರೋದು ನೋಡಿ ಗಂಡ ಕೇಳಿದ, 'ಸಾಹೇಬರೇ ಈ ಜಾದು ವಸ್ತುವಿಗೆ ಎಷ್ಟು ರೂಪಾಯಿ? ನಾನೂ ಕೊಳ್ಳಬೇಕು' ಅಂತ.

ಆ ಹುಡುಗೀನ ನೋಡಿ, ಹೇಗೆ ಸಿಗರೇಟು ಸೇದ್ತಿದ್ದಾಳೆ!
ಅವಳು ಹುಡುಗಿಯಲ್ಲ, ಅದು ನನ್ನ ಮಗ.
ಓಹ್ ಸಾರಿ ಸರ್, ನೀವು ಅವರ ತಂದೆ ಅನ್ನೋದು ಗೊತ್ತಾಗಲಿಲ್ಲ.
ನಾನು ಅವನ ತಂದೆ ಅಲ್ಲಾ, ಅವನ ತಾಯಿ.

ಸಂಗ್ರಹ: ಶರದ ಕುಲಕರ್ಣಿ, ಬೀದರ್